ಓ.ಎಸ್. ನಂ. 72/2014

ಪಿ.ಡಬ್ಲ್ಯು‌ಃ 01

ದಿನಾಂಕಃ 19-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 01 ನೇ ಪ್ರತಿವಾದಿ ಪರ – ಶ್ರೀ ಹೆಚ್.ಬಿ.ಎನ್ . ವಕೀಲರಿಂದ.

ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ. ನನ್ನ ತಂದೆಯ ತಂದೆಯ ಹೆಸರು ಸಿದ್ದಯ್ಯನಕೋಟೆ ಬಸಪ್ಪ. ಸದರಿರವರಿಗೆ ಇಬ್ಬರು ಗಂಡುಮಕ್ಕಳು ಮತ್ತು ನಾಲ್ವರು ಹೆಣ್ಣುಮಕ್ಕಳಿರುತ್ತಾರೆ. ಗಂಡುಮಕ್ಕಳ ಹೆಸರು ನನ್ನ ತಂದೆ ತಿಪ್ಪಣ್ಣ ಮತ್ತು ರುದ್ರಣ್ಣ. ಸದರಿ ರುದ್ರಣ್ಣನವರು ವಯಸ್ಸಿನಲ್ಲಿ ನನ್ನ ತಂದೆಗಿಂತ ಹಿರಿಯರು ಎಂದರೆ ಸರಿ. ನನ್ನ ತಂದೆ ಮತ್ತು ರುದ್ರಣ್ಣನವರು ತೀರಿಕೊಂಡಿರುತ್ತಾರೆ. ನನ್ನ ತಂದಗೆ ಮತ್ತು ನನ್ನ ದೊಡ್ಡಪ್ಪನವರ ನಡುವೆ ಅವರ ಜೀವಿತ ಕಾಲದಲ್ಲಿ ಪಾಲು-ವಿಭಾಗ ಆಗಿತ್ತು. ಸದರಿ ಪಾಲು-ವಿಭಾಗ ಯಾವ ವರ್ಷದಂದು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಪಾಲು-ವಿಭಾಗದಲ್ಲಿ ನನ್ನ ತಂದೆಗೆ ಎಷ್ಟು ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತಿಪ್ಪಣ್ಣ 1991 ರಲ್ಲಿ ನಿಧನ ಹೊಂದಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವ ತನಕ ನಮ್ಮ ಮನೆಯ ಜವಾಬ್ದಾರಿಯನ್ನು ನನ್ನ ತಂದೆಯೇ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ತನ್ನ ದೊಡ್ಡಪ್ಪನವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ 2-3 ವರ್ಷಗಳ ನಂತರ ನನ್ನ ದೊಡ್ಡಪ್ಪನವರು ತೀರಿಕೊಂಡಿರುತ್ತಾರೆ.

ನಾನು ಎಸ್.ಎಸ್.ಎಲ್.ಸಿ.ವರೆಗೆ ಓದಿಕೊಂಡಿರುತ್ತೇನೆ. 02 ನೇ ಪ್ರತಿವಾದಿ ಎಸ್.ಕೆ. ರುದ್ರಮುನಿ ನನ್ನ ಸಹೋದರ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಸದರಿರವರನ್ನು ತನ್ನ ದೊಡ್ಡಪ್ಪನವರಿಗೆ ದತ್ತುವಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ದಾವೆಯಲ್ಲಿ 02 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ದಾವೆ ಸಲ್ಲಿಸುವ ಮುಂಚೆ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಮತ್ತು ಋಣಭಾರ ಪ್ರಮಾಣ ಪತ್ರವನ್ನು ನೋಡಿ ದಾವೆ ಸಲ್ಲಿಸಿರುತ್ತೇನೆ. ಈ ದಾವೆ ಸಲ್ಲಿಸುವ ಮುಂಚೆ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸಾಕ್ಷಿಯು ದಾಖಲಾಗಿರಲಿಲ್ಲ ಎಂದು ನುಡಿಯುತ್ತಾರೆ.

ಈ ಹಿಂದೆ ಎಸ್.ಕೆ. ಕರಿಬಸಪ್ಪ ಎಂಬುವವರು ನನ್ನ ಮತ್ತು ನನ್ನ ಸಹೋದರರ ಮೇಲೆ ಅಸಲು ದಾವಾ ಸಂಖ್ಯೆ 99/2013 ನ್ನು ದಾಖಲಿಸಿದ್ದರು ಎಂದರೆ ಸಾಕ್ಷಿಯು ತನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸಾಕ್ಷಿಯು ತನಗೆ ನೆನಪಿಲ್ಲ ಎಂದು

ನುಡಿಯುತ್ತಾರೆ. ಸದರಿ ದಾವೆ ರಾಜೀಯಲ್ಲಿ ಕೊನೆಗೊಂಡಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನಗೆ ಇಂಗ್ಲೀಷ್ ಓದಲು ಬರುತ್ತದೆ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಪಾಟೀಸವಾಲನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.